ಅನುಗುಣವಾಗಿ ಕರೆಸಿ ಮನಸೋ ಇಚ್ಛೆ ಚರ್ಚಿಸಲು ಬಿಡಬೇಕು. ನಮ್ಮ ಟಿ.ವಿ.ಯನ್ನು ರಿಮೋಟ್‌ನಲ್ಲಿ ಮ್ಯೂಟ್ ಮಾಡಿದ ಮೇಲೂ ಮ್ಯಾಕ್ಸಿಮಂ ವಾಲ್ಯೂಮ್‌ನಲ್ಲಿ ಈ ಚರ್ಚೆ ಕೇಳಿಸುತ್ತಿರುತ್ತದೆ. ಸಧ್ಯ ಕೆಳಗೆ ಸ್ಕ್ರಾಲ್‌ನಲ್ಲಿ ಹರಿಯುವ ಬ್ರೇಕಿಂಗ್ ನ್ಯೂಸ್ ಸೈಲೆಂಟಾಗಿ ಕಾಣಿಸಿಕೊಳ್ಳುವುದು ಒಂದು ನೆಮ್ಮದಿಯ ಸಂಗತಿ. ಚರ್ಚೆ ತಾರಕಕ್ಕೆ ಹೋದಾಗ ಪಕ್ಕನೆ ಜಾಹೀರಾತಿಗಾಗಿ 'ಬ್ರೇಕ್' ತೆಗೆದುಕೊಳ್ಳುತ್ತಾರೆ.

ಒಮ್ಮೆ ಒಂದು ಚಾನೆಲ್‌ನಲ್ಲಿ 'ಗಂಡ, ಹೆಂಡತಿಯ ಮಾತು ಕೇಳದೇ ಇರಬೇಕಾದ್ರೆ ಏನ್ ಮಾಡಬೇಕು' ಎಂಬ ಚರ್ಚೆಯೊಂದು ಪ್ರಸಾರವಾಯ್ತು. ಅದರಲ್ಲಿ ಸಮಾಜದ ಮೂವರು ಧುರೀಣರು ಪಾಲ್ಗೊಂಡಿದ್ದರು. ಒಬ್ಬರು ಆಜನ್ಮ ಬ್ರಹ್ಮಚಾರಿ, ಇನ್ನೊಬ್ಬರು ಒಂದು ಪ್ರತಿಷ್ಠಿತ ಮಠದ ಸ್ವಾಮಿಗಳು, ಮತ್ತೊಬ್ಬರು ಸನ್ಯಾಸಿ! ಕಾರ್ಯಕ್ರಮ ಎರಡು ತಾಸುಗಳಷ್ಟು ಸುದೀರ್ಘ ಕಾಲ ಯಶಸ್ವಿಯಾಗಿ ಪ್ರಸಾರವಾಯ್ತು. ವಿವಾಹಿತರು, ಮದುವೆ ಮಾಡಿಕೊಳ್ಳಲು, ತಯಾರು ಮಾಡಿಕೊಳ್ಳಲು ಸಿದ್ಧವಾಗುತ್ತಿರುವ ತರುಣ ತರುಣಿಯರು, ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದವರು, ವಿಚ್ಛೇದನ ಪಡೆದವರು, ಎಲ್ಲರೂ ದಾಖಲೆ ಸಂಖ್ಯೆಯಲ್ಲಿ ಕಾರ್ಯಕ್ರಮ ವೀಕ್ಷಿಸಿ, ಅದ್ಭುತ ಟಿ.ಆರ್.ಪಿ. ತಂದುಕೊಟ್ಟರು. ಅದರ ಮರುಪ್ರಸಾರ ಸುಮಾರು ನೂರರ ಹತ್ತಿರ ಬಂದಿರುವ ಬ್ರೇಕಿಂಗ್ ನ್ಯೂಸ್ ಈಗಷ್ಟೇ ಬಂದಿದೆ! ಅಂದರೆ ಯಾರಿಗೆ ಯಾವುದು ಗೊತ್ತಿಲ್ಲವೋ ಅದರ ಬಗ್ಗೆ ಮಾತನಾಡಿದರೆ ಟಿಆರ್‌ಪಿ ಏರುವುದು ಖಂಡಿತ!

ಆರೋಗ್ಯ ಕಾರ್ಯಕ್ರಮ ಹಾಗೂ ಭವಿಷ್ಯ ಹೇಳುವ ಕಾರ್ಯಕ್ರಮ ಅತ್ಯಂತ ಜನಪ್ರಿಯವೆನ್ನುವುದು ಸುದ್ದಿಯೇನಲ್ಲ ಬಿಡಿ. ಸಮಸ್ಯೆ ಬಂದಾಗ ನೇರವಾಗಿ ವೈದ್ಯರೊಡನೆ ಮಾತನಾಡಿ ಪರಿಹರಿಸಿಕೊಳ್ಳಬೇಕೆಂಬುದು ಶ್ರೀ ಹಾಗೂ ಸ್ತ್ರೀ ಸಾಮಾನ್ಯರ ಆಸೆ. ಒಂದು ಸಾರಿ ಒಬ್ಬ ಮಹಿಳೆ ಟಿ.ವಿ. ಡಾಕ್ಟರನ್ನು (ಚರ್ಮತಜ್ಞೆ) 'ನನ್ನ ಮುಖದ ತುಂಬ ಕಲೆಗಳಿವೆ, ಅದಕ್ಕೆ ನಾನು ಏನು ಮಾಡಬೇಕು' ಎಂದು ಕೇಳಿದರು. ಅದಕ್ಕೆ ವೈದ್ಯರು 'ನಿಮ್ಮ ಕಲೆಗಳನ್ನು ನೋಡದೆಯೆ ಪರಿಹಾರ ಸೂಚಿಸುವುದಕ್ಕೆ ಆಗುವುದಿಲ್ಲ. ನಿಮ್ಮ ಮುಖದ ಫೋಟೋವನ್ನು ಕಳುಹಿಸಿ, ಸಧ್ಯಕ್ಕೆ ನಿಮ್ಮ ಮನೆಯ ಹತ್ತಿರ ಇರುವ ಚರ್ಮತಜ್ಞ ವೈದ್ಯರಿಗೆ ತೋರಿಸಿ' ಎಂದರು. ಬೇರೆಯವರಿಗೆ ಮುಖ ತೋರಿಸುವಂತಾಗಲಿ ಎಂಬಾಸೆಯಿಂದ ಪ್ರಶ್ನೆ ಕೇಳಿದ ಮಹಿಳೆಗೆ ನಿರಾಸೆಯಾಯ್ತು. ಆದರೆ ತಕ್ಷಣ ಚಾನೆಲ್‌ಗೆ ಒಂದು ಸಲಹೆ ಇ–ಮೇಲ್‌ನಲ್ಲಿ ರವಾನೆಯಾಯ್ತು.

'ಈಗಷ್ಟೇ ಮುಖದ ಕಲೆ ಬಗ್ಗೆ ಪ್ರಶ್ನೆ ಕೇಳಿದ ಮಹಿಳೆಯನ್ನು ನಿಮ್ಮ ಜನಪ್ರಿಯ 'ಬ್ಯೂಟಿ ಸ್ಪಾಟ್' ಕಾರ್ಯಕ್ರಮಕ್ಕೆ ಕರೆಸಿ ಮುಖದ ಕಲೆಯನ್ನು ಮರೆಮಾಚುವ ಕಲೆಯನ್ನು ಹೇಳಿಕೊಡಬಹುದಲ್ಲವೆ? ಅವರು ನಿಮ್ಮ ಚಾನೆಲ್‌ಗೆ ಅವರ ಖರ್ಚಿನಲ್ಲೇ ಬಂದು ಹೋಗುತ್ತಾರೆ. ಹಾಗೆ ನಿಮಗೊಬ್ಬರು ಪುಕ್ಕಟೆ ಮಾಡೆಲ್ ಸಿಕ್ಕಂತಾಗುತ್ತೆ' ಎನ್ನುವುದು ಅವರ ಸಲಹೆ! ಜತೆಗೆ 'ಸೀರಿಯಲ್ ಕಲಾವಿದರನ್ನೆಲ್ಲ ಆಗಾಗ್ಗೆ ಒಂದುಗೂಡಿಸಿ ಅಭ್ಯಾಸವಿದೆ. 'ಆರೋಗ್ಯ' ಹಾಗೂ 'ಬ್ಯೂಟಿ ಸ್ಪಾಟ್' ಕಾರ್ಯಕ್ರಮ ಮಿಕ್ಸ್ ಮಾಡಿ. ಒಂದೇ ಏಟಿಗೆ ಎರಡು ಹಕ್ಕಿ ಹೊಡೆಯಬಹುದಲ್ಲವೆ?' ಎಂದೂ ಆತ ಸಲಹೆ ನೀಡಿದ್ದ. ಇ–ಮೇಲ್ ಬಂದ ಕ್ಷಣವೇ ಚಾನೆಲ್ ಕಾರ್ಯಕರ್ತರು ಪ್ರಶ್ನೆ ಕೇಳಿದ ಕಲಾಮಣಿಯ ಫೋನ್ ಹುಡುಕಲು ಶುರು ಮಾಡಿದರು.

ಚುನಾವಣೆ, ದೇಶದಲ್ಲಿ ಯಾವುದಾದರೂ ಜಾಗದಲ್ಲಿ ನಡೆಯುತ್ತಿರಲೇಬೇಕು. ಎಲ್ಲೂ ಸ್ಪಷ್ಟ ಬಹುಮತ ಬರಬಾರದು. ರಾಜಕಾರಣಿಗಳು ಪಕ್ಷದಿಂದ ಪಕ್ಷಕ್ಕೆ ಹಾರುತ್ತಿರಬೇಕು. ರಾಜ್ಯಪಾಲರು, ನ್ಯಾಯಾಧೀಶರು ಏನಾದರೊಂದು ವಿವಾದಾತ್ಮಕ ತೀರ್ಪು ನೀಡುತ್ತಿರಲೇಬೇಕು. ಭ್ರಷ್ಟಾಚಾರ, ಅತ್ಯಾಚಾರ ಮುಕ್ತ ಭಾರತ ಆಗಲೇ ಬಾರದು. ಜನರು ಜಾತಿಯನ್ನು ಕಡೆಗಣಿಸಿ ಓಟು ಹಾಕಿದರೆ ಚಾನೆಲ್‌ಗಳಿಗೆ ಅದೇ ದೊಡ್ಡ ಆತಂಕ. ಜನರು ಲಂಚ ಪಡೆಯುತ್ತಿರಬೇಕು, ಜಾತಿ ಜಗಳಗಳನ್ನು ಆಡುತ್ತಿರಬೇಕು, ಶೋಷಣೆ ಮಾಡುತ್ತಿರಬೇಕು. ಖಾಲಿ ಜಾಗಗಳು ನೋಟಿಫೈ ಆಗುತ್ತಿರಬೇಕು– ಇಲ್ಲದಿದ್ದರೆ ಡಿನೋಟಿಫೈ ಆಗುವುದಾದರೂ ಹೇಗೆ? ಡೈರಿ ಬರೆಯುತ್ತಿರಬೇಕು, ಐಟಿ ರೈಡ್ ಆಗುತ್ತಿರಬೇಕು, ಕಪ್ಪ ಸಂದಾಯವಾಗುತ್ತಿರಲೇ ಬೇಕು. ಒಟ್ಟಾರೆ ನ್ಯೂಸ್ 'ಬ್ರೇಕ್' ಆಗುತ್ತಿರಬೇಕು. ಇಲ್ಲದಿದ್ದರೆ 'ಅಭಿವೃದ್ಧಿ' ಹೇಗೆ ಸಾಧ್ಯ– ಚಾನೆಲ್‌ಗಳದ್ದು!

ಒಂದು ವೇಳೆ ರಾಜರತ್ನಂ ಬದುಕಿದ್ದಿದ್ರೆ ಈಗ ಅವರ ಪದ್ಯವನ್ನು ಅವರೇ ತಿರುಚಿ ಬರೆಯುತ್ತಿದ್ದರು:

*ನ್ಯೂಸ್ ಇರಬೇಕು ಮಿಂಚ್ ಒಡ್ದಂಗೆ*
*ಕೇಳ್ದೋರ್ ನೋಡ್ದವರ್ 'ಹಾಂ' ಎನ್ನಬೇಕು*
*ಸೋನೆ ಇಡಿದ್ರೆ ಉಗದು ಅಂದಾರು*
*ಮುಚ್ಕೊಂಡ್ ಓಗೊ ಸಾಕು*

*ಕುಂಬಾರ್ ಗೌಡನ ಚಕ್ರಕ್ಕೂನೆ*
*ಗಾಳ ನೋಡಿದ್ ಮೀನೂ*
*ಸುತ್ಕೊಂಡು ಸುತ್ಕೊಂಡ್ ಓಗೋದು*
*ಅದ್ಕ್ಯಾಕ್ ನನ್ಗು ನಿನ್ಗು?*

ಆದರೆ ನಮ್ಮ ಟೀವಿ ಆ್ಯಂಕರ್ಸ್ ಹೇಳ್ತಾರೆ– ನಾವೂ ಸುತ್ತುವ ಮೀನ್‌ಗಳೇ! ಸುದ್ದಿ ಸುತ್ತ ಸುತ್ತುವ ಮೀನುಗಳೇ. ಯು ನೊ ವಾಟ್ ಐ ಮೀನೂ?'

...ಸ್ಕ್ರಾಲ್‌ನಲ್ಲೊಂದು ಬ್ರೇಕಿಂಗ್ ನ್ಯೂಸ್ ಹರೀತಿದೆ: 'ಗಮನಿಸಿ, ನಾಳೆಯಿಂದ ಈಗಿನ ಎಲ್ಲ ನ್ಯೂಸ್ ಚಾನೆಲ್‌ಗಳು ಬ್ರೇಕಿಂಗ್ ನ್ಯೂಸ್ ಚಾನೆಲ್‌ಗಳೆಂದು ಮರುನಾಮಕರಣಗೊಳ್ಳುತ್ತಿವೆ!'

## ಹೀಗೂ ಉಂಟೆ! ಉತ್ತರ

1. ಭಾವಿಸುವುದನ್ನು ನಿಲ್ಲಿಸಿ!
2. ಮೌಂಟ್ ಎವರೆಸ್ಟೇ ಆಗಿತ್ತು!
3. ಹೆಂಡತಿ ಗಂಡನನ್ನು ಕ್ಯಾಮೆರಾದಲ್ಲಿ ಶೂಟ್ ಮಾಡಿದ್ದಳು!



4. ಗುಂಡ ಚೀಟಿಯಲ್ಲಿ ಮುದ್ದಾದ ಅಕ್ಷರದಲ್ಲಿ - ನಿಮ್ಮ ಸರಿಯಾದ ತೂಕ - ಎಂದು ಬರೆದಿದ್ದ!
5. ವಿಮಾನ ರನ್‌ವೇಯಲ್ಲಿ ನಿಂತಿತ್ತು!

